ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ,
ಶ್ರೀರಂಗಪಟ್ಟಣ

ಸಿ ಸಿ 22/2019

ಹೆಸರು : ಮಹದೇವ

ತಂದೆಯ ಹೆಸರು : ಕರಪಯ್ಯ

ವಯಸ್ಸು : 33 ವರ್ಷ

ವೃತ್ತಿ : ಕೂಲಿ ಕೆಲಸ

ವಾಸ : ಕ್ಯಾತನಹಳ್ಳಿ ಗ್ರಾಮ

ದಿನಾಂಕ:24.12.2021 ರಂದು ಸಾಕ್ಷಿಗೆ ಪ್ರಮಾಣ ವಚನ ನೀಡಲಾಯಿತು.

ಸರ್ಕಾರಿ ಪರ ಅಭಿಯೋಜಕರಿಂದ ಸಾಕ್ಷಿಯ ಮುಖ್ಯ ವಿಚಾರಣೆ:

1. ಚಾಸಾ: 1 ಸೋಮಶೇಖರ್ ಈತನು ನಮ್ಮ ಊರಿನವರು ಇದ್ದು ಆತನ ಪರಿಚಯ ನನಗೆ ಇರುತ್ತದೆ. ಸುಮಾರು 2 ವರೆ ವರ್ಷಗಳ ಹಿಂದೆ ಸಾಯಂಕಾಲ 7.00 ಗಂಟೆ ಸುಮಾರಿಗೆ ನಮ್ಮ ಊರಾದ ಕ್ಯಾತನಹಳ್ಳಿ ಗ್ರಾಮದಿಂದ ರೈಲ್ವೆ ಸ್ಟೇಷನ್ ಕಡೆಗೆ ನಾನು ಮತ್ತು ನಮ್ಮ ಊರಿನವರಾದ ಚಾಸಾ: 1 ಸೋಮಶೇಖರ್ ಇಬ್ಬರೂ ಸೇರಿ ದ್ವಿಚಕ್ರ ವಾಹನದ ಮೇಲೆ ಹೊರಟಿದ್ದೆವು. ಚಾಸಾ: 1 ರವರ ವಾಹನಕ್ಕೆ ಪೆಟ್ರೋಲ್ ತುಂಬಿಸಿಕೊಳ್ಳಲು ಹೊರಟಿದ್ದೆವು. ಆ ಸಮಯಕ್ಕೆ ಕಡತನಾಳು ಡಾಬಾ ಹತ್ತಿರ ಜನ ಸೇರಿದ್ದರು. ನಾವು ಹೋಗಿ ನೋಡಲಾಗಿ, ರಸ್ತೆ ಅಪಘಾತವಾಗಿದ್ದು ಕಂಡು ಬಂತು. ಅಪಘಾತದಲ್ಲಿ ಗಾಯಗೊಂಡು ಸ್ಥಳದಲ್ಲೇ ಮರಣ ಹೊಂದಿದ

ವ್ಯಕ್ತಿಯನ್ನು ನಾವು ನೋಡಿದಾಗ ನಮ್ಮ ಊರಿನ ರವಿ ಕುಮಾರ ಅಂತ ಗೊತ್ತಾಯಿತು. ತಮಿಳುನಾಡಿನ ಲಾರಿಗೂ ಮತ್ತು ರವಿ ಕುಮಾರ್ ನಡೆಸುತ್ತಿದ್ದ ದ್ವಿಚಕ್ರ ವಾಹನದ ನಡುವೆ ಅಪಘಾತವಾಗಿತ್ತು ಅಂತ ನಮಗೆ ತಿಳಿಯಿತು. ನಾವು ಹೋಗಿ ನೋಡುವಷ್ಟರಲ್ಲಿ ಅಪಘಾತ ಆಗಿತ್ತು. ಅಪಘಾತ ಯಾರ ತಪ್ಪಿನಿಂದ ಆಗಿದೆ ಅಂತ ನನಗೆ ಹೇಳಲು ಗೊತ್ತಿಲ್ಲ. ಆರೋಪಿತರ ಪೆಟ್ಟಿಗೆಯಲ್ಲಿರುವ ಆರೋಪಿತನನ್ನು ನಾನು ಈಗ ನೋಡುತ್ತಿದ್ದು ನನಗೆ ಗುರುತಿಸಲಾಗುವುದಿಲ್ಲ. ಅಪಘಾತವನ್ನು ನಾನು ಕಣ್ಣಾರೆ ನೋಡಿಲ್ಲ. ಅಪಘಾತವನ್ನು ಕಣ್ಣಾರೆ ನೋಡಿರುತ್ತೇನೆ ಅಂತ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ಕೊಟ್ಟಿಲ್ಲ.

ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ಮಾಡಿಕೊಂಡಬೇಕು ಅಂತ ಸರ್ಕಾರಿ ಪರ ಅಭಿಯೋಜಕರು ಪ್ರಾರ್ಥಿಸಿರುತ್ತಾರೆ. ಆಲಿಸಲಾಯಿತು ಮತ್ತು ಪ್ರಕರಣವನ್ನು ಪರಿಶೀಲನೆ ಮಾಡಲಾಯಿತು. ಪ್ರಸ್ತುತ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಅಂತ ಪರಿಗಣಿಸಿ ಪಾಟೀ ಸವಾಲು ಮಾಡಲು ಅವಕಾಶ ನೀಡಲಾಯಿತು.

<u>ಸರ್ಕಾರಿ ಅಭಿಯೋಜಕರಿಂದ ಸಾಕ್ಷಿಯ ಪಾಟೀ ಸವಾಲು ಃ</u>

2. ದಿನಾಂಕಃ 20.11.2018 ರಂದು ಪೋಲೀಸರ ಮುಂದೆ ನಾನು ಈಗ ಓದಿ ಹೇಳಿದಂತೆ ಇರುವಂತೆ ಹೇಳಿಕೆ ಕೊಟ್ಟಿರುತ್ತೇನೆ ಅನ್ನುವುದು ಸರಿಯಲ್ಲ.**(ದಿನಾಂಕಃ 22.11.2018 ರ ಹೇಳಿಕೆಯನ್ನು ನಿಪಿಃ5 ಅಂತ ಗುರುತಿಸಲಾಯಿತು)** ನಿಪಿಃ 5 ರಂತೆ

ನಾನು ಮೇಲ್ಕಂಡ ವಿಳಾಸದಲ್ಲಿ ............ ಮತ್ತು ಚಾಲಕನನ್ನು ನೋಡಿದ್ದು ಮತ್ತೆ ನೋಡಿದರೆ ಗುರುತಿಸುತ್ತೇನೆ ಅಂತ ಹೇಳಿಕೆ ಕೊಟ್ಟಿರುತ್ತೇನೆ ಅನ್ನುವುದು ಸರಿಯಲ್ಲ. ನ್ಯಾಯಾಲಯದ ಮುಂದಿರುವ ಆರೋಪಿತನು ನಮ್ಮ ಊರಿನ ರವಿಕುಮಾರ್ ಅನ್ನುವವನು ಬೈಕ್ ಮೇಲೆ ಹೋಗುವ ಸಮಯಕ್ಕೆ ಆರೋಪಿತನು ಟಿಎನ್-33- ಎಯು- 4907 ಇದನ್ನು ಅತಿ ಜೋರಾಗಿ ಅಜಾಗರೂಕತೆಯಿಂದ ಚಾಲನೆ ಮಾಡಿಕೊಂಡು ಬಂದು ರಸ್ತೆ ಪಕ್ಕದಲ್ಲಿ ಹೊರಟಿದ್ದ ಬೈಕ್ ಚಾಲಕ ರವಿಕುಮಾರ್ ಇವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಬೈಕ್ ಚಾಲಕ ಕೆಳಗೆ ಬಿದ್ದುದರಿಂದ ಅವನ ತಲೆಯ ಮೇಲೆ ಸದರಿ ಲಾರಿಯ ಚಕ್ರ ಹರಿದಿದ್ದರಿಂದ, ರವಿ ಕುಮಾರ್ ಈತನು ಸ್ಥಳದಲೇ ಮೃತಪಟ್ಟನು. ಸದರಿ ಬೈಕ್ ಸಂಪೂರ್ಣ ಜಕಂ ಗೊಂಡಿದ್ದು ನಂತರ ನಾವು ಮೃತ ವ್ಯಕ್ತಿಯನ್ನು ಗುರುತಿಸಿ ತರುವಾಯ ಮೃತ ವ್ಯಕ್ತಿಯನ್ನು ಶ್ರೀರಂಗಪಟ್ಟಣ ಆಸ್ಪತ್ರೆಗೆ ಸಾಗಿಸಿದೆವು ಅಂತ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿರುತ್ತೇನೆ ಅನ್ನುವುದು ಸರಿಯಲ್ಲ. ಪ್ರಸ್ತುತ ಅಪಘಾತ ಈಗ ನ್ಯಾಯಾಲಯದ ಮುಂದಿರುವಂತಹ ಆರೋಪಿತನ ತಪ್ಪಿನಿಂದ ಆಗಿದೆ ಅಂತ ನನಗೆ ಗೊತ್ತಿದ್ದರೂ ಸಹಿತ ಮತ್ತು ಅಪಘಾತವನ್ನು ನಾನು ಕಣ್ಣಾರೆ ನೋಡಿ ನಿಪಿಃ 5 ರಂತೆ ಹೇಳಿಕೆ ನೀಡಿದ್ದಾಗ್ಯೂ ನನಗೆ ಏನೊಂದೂ ಗೊತ್ತಿಲ್ಲ ಅಂತ ಆರೋಪಿತನಿಗೆ ಸಹಾಯು ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಅನ್ನುವುದು ಸರಿಯಲ್ಲ.

ಮರು ಪಾಟೀ ಸವಾಲು ಇರುವುದಿಲ್ಲ.

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇರುವುದಿಲ್ಲ ಅಂತ ನಿವೇದಿಸಿರುತ್ತಾರೆ.

**(**ನನ್ನ ಉಖ್ತಲೇಖನದ ಮೇರೆಗೆ ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು**)**

**ಓ.ಹೇ.ಕೇ.ಸಾ.ಸ.ಒ.ಇದೆ.**

ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆಎಂಎಫ್‌ಸಿ,ಶ್ರೀರಂಗಪಟ್ಟಣ